ಓ.ಎಸ್. 294/2021
ಡಿ.ಡಬ್ಲ್ಯೂಃ-1

ದಿನಾಂಕಃ **27.10.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್.ವಿ.ಎಂ. ವಕೀಲರಿಂದಃ</u>

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಪ್ರಸ್ತುತ ಚೇಲನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ವಾದಿಗಳು ಎಷ್ಟು ಆಸ್ತಿಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಿರುತ್ತಾರೆಂದು ಹೇಳಲಾಗುವುದಿಲ್ಲ. ದಾವಾ ಸರ್ವೆ ನಂಬರ್ಗಳನ್ನು ಹೇಳಲು ಆಗುವುದಿಲ್ಲ. ದಾವಾ ಆಸ್ತಿ 1, 3, 5 ರಿಂದ 7 ನೇ ಆಸ್ತಿಗಳು ನನ್ನ ತಂದೆ ರಂಗಶ್ಯಾಮಯ್ಯನವರಿಗೆ ಸೇರಿದಂತಹ ಆಸ್ತಿಗಳು. ಸದರಿ ಆಸ್ತಿಗಳನ್ನು ನನ್ನ ತಂದೆಗೆ ದಾನ ಪತ್ರದ ಮೂಲಕ ಬಂದಿರುತ್ತವೆ ಸದರಿ ದಾನ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ದಾನ ಪತ್ರದಲ್ಲಿ ರಂಗಶ್ಯಾಮಯ್ಯನಿಗೆ ದಾನ ಕೊಟ್ಟಿರುತ್ತೇನೆಂದು ಬರೆದಿರುತ್ತಾರೆ. ಸದರಿ ದಾನ ಪತ್ರ 1967 ರಲ್ಲಿ ಆಗಿರುತ್ತದೆ. 1967 ರಲ್ಲಿ ನನ್ನ ತಂದೆ ಮತ್ತು ವಾದಿಗಳ ವಯಸ್ಸು ಹೇಳಲಾಗುವುದಿಲ್ಲ. ದಾನ ಪತ್ರ ಅಪ್ರಾಪ್ತ ವಯಸ್ಕರಾಗಿದ್ದ ವಾದಿಗಳಿಗೆ ಮತ್ತು ರಂಗಶಾಮಯ್ಯ ಮೂರು ಜನರಿಗೆ ಸೇರಿಸಿ ಬರೆದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

**2.** ದಾವಾ ಸ್ವತ್ತುಗಳಲ್ಲಿ ಇಂದಿನವರೆಗೂ ವಿಭಾವಾಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾವು ವಿಭಾಗ ಮಾಡಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ವಿಭಾಗವಾದ ದಿನಾಂಕ ಮತ್ತು ವಿಭಾಗದಲ್ಲಿ ಯಾರಿಗೆ ಯಾವ ಆಸ್ತಿಗಳು ಬಂದಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತುಗಳಲ್ಲಿ ನಾನು ಮತ್ತು ವಾದಿಗಳು ಜಂಟಿ ಸ್ವಾಧೀನದಲ್ಲಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳ ದಾಖಲೆಗಳು ನನ್ನ ತಂದೆಯ ಹೆಸರಿನಲ್ಲಿರುತ್ತವೆ. ಸಾಕ್ಷಿಯು ಮುಂದುವರೆದು ದಾನವಾದ ಸ್ವತ್ತುಗಳು ನನ್ನ ತಂದೆಯ ಹೆಸರಿನಲ್ಲಿರುತ್ತವೆ ಉಳಿದ ಆಸ್ತಿಗಳು ಮೂರು ಜನರ ಹೆಸರಿನಲ್ಲಿರುತ್ತವೆ ಎಂದು ಉತ್ತರಿಸಿರುತ್ತಾರೆ.

**3.** ದಾವಾ ಆಸ್ತಿ ನಂ. 2, 4, 8 ರಿಂದ 10ರ ಸರ್ವೆ ನಂಬರ್, ಚಕ್ಕುಬಂಧಿ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸರ್ವೆ ನಂಬರ್ ಚಕ್ಕುಬಂಧಿ ನನ್ನ ತಂದೆಗೆ ಗೊತ್ತಿರುತ್ತದೆ ಆದರೆ ಅವರು ತೀರಿಕೊಂಡಿರುತ್ತಾರೆ. ದಾವಾ ಆಸ್ತಿ 2, 4 , 8 ರಿಂದ 10 ರಲ್ಲಿ ನಾನು ಮತ್ತು ವಾದಿ ಜಂಟಿ ಸ್ವಾಧೀನದಲ್ಲಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಎಲ್ಲಾ ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ಮತ್ತು ಪ್ರತಿವಾದಿಗಳಿಗೆ ಪಾಲು ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಗೆ ದಾನ ಕೊಟ್ಟಿರುವ ಆಸ್ತಿಗಳಲ್ಲಿ ಪಾಲು ಇರುವುದಿಲ್ಲ ಉಳಿದ ಆಸ್ತಿಗಳಲ್ಲಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ದಾನ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನಿಮಗೆ ತೊಂದರೆ ಇರುವುದಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

**4.** ಎಲ್ಲಾ ದಾವಾ ಸ್ವತ್ತುಗಳಲ್ಲಿ ವಾದಿಗಳಿಗೆ ಪಾಲು ಇದ್ದರೂ ಸಹ ವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ